ನಗರದ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 130.

ಮೃತಪಟ್ಟ ದಾವಣಗೆರೆ ಭೀಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ದಾವಣಗೆರೆ ನರಸಿಂಗರಾವ್, ಮೃತಪಟ್ಟ ಸದರೀ ದಾವಣಗೆರೆ ಭೀಮರಾಯರಿಗೆ ಹಿರೇಮಗನು ಆಗಬೇಕೆಂಬ ಹಕ್ಕು ದಾರಿ ಮೇಲೆ ಚಿಕ್ಕ ಮಗಳೂರು ಸ್ಥಳದ ದಾವಣಗೆರೆ ನರಸಿಂಗರಾವ್ ಯಂಬುವರು ಚಿಕ್ಕ ಮಗಳೂರು ವಾಸಸ್ಥರಾಗಿ ಮೃತಪಟ್ಟ ಭೀಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ 5,000 ರೂಪಾಯಿಗಳ ಸಾಲವನ್ನ ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದಾವಣಗೆರೆ ನರಸಿಂಗರಾಯರ ಅರ್ಜಿಯನ್ನು ಸ್ ೧೮೯೭ನೇ ಇಸವಿ ಜನವರಿ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟು ಪಡೆಯುತಕ್ಕ ಬಾಧ್ಯತೆಯು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾವಣಗೆರೆ ಭೀಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬—97ನೇ ಇಸವಿ ಮಿ|| ಅರ್ಜೀ ನಂಬರ್ 131.

ಮೃತಪಟ್ಟ ಕಡೂರು ತಾಲ್ಲೂಕು ಬಿದರೆ ಮೂಗಣಿ ಗರಗದಹಳ್ಳಿ ಗ್ರಾಮದ ಬುಮ್ಮಿ ನಂಜಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರನು ಬುಮ್ಮಿ ಮರುಳಪ್ಪ ಯಂಬುವನು, ಮೃತಪಟ್ಟ ಸದರೀ ಬುಮ್ಮಿ ನಂಜಂಣ ಯಂಬುವನಿಗೆ ಹಿರೇ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ತಾಲ್ಲೂಕು ಬಿದರೆ ಮೂಗಣಿ ಗರಗದಹಳ್ಳಿ ಗ್ರಾಮದ ಸ್ಥಳದ ಬುಮ್ಮಿ ಮರುಳಪ್ಪ ಯಂಬುವನು ಡಿಟೋ ತಾಲ್ಲೂಕು ಡಿಟೋ ಗ್ರಾಮದ ವಾಸಸ್ಥನಾಗಿ ಮೃತಪಟ್ಟ ಬುಮ್ಮಿ ನಂಜಂಣ ಯಂಬುವನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಬುಮ್ಮಿ ಮರುಳಪ್ಪ ಯಂಬುವನ ಅರ್ಜಿಯನ್ನು 1897ನೇ ಇಸವಿ ಜನವರಿ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬುಮ್ಮಿ ನಂಜಂಣನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಡಿಸೆಂಬರ್ ತಿಂಗಳ 4ನೇ ತಾರೀಖಿನಲ್ಲಿ ಕೋರ್ಟ್ ವೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು.

ಇಸ್ತಿಹಾರ್‌ನಾಮಾ.

19ನೇ ನವಂಬರ್ ಸ್ ೧೮೯೬.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಎಲೆಮೆಲಾಳು ಅಡಿಗೆ ಬೈಲ್ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ ೧೮೯೭ನೇ ಇಸವಿ ಜನವರಿ ತಾರೀಖು 8ನೇ ಶುಕ್ರವಾರ ಹಗಲು 11 ಘಂಟೆಗೆ ಕಡೂರು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮುಂಜೂರಾತಿಗೆ ಎಳಪಡಿಸಿ ಕೊಪ್ಪ ತಾಲ್ಲೂಕು ಅಮಲ್ದಾರ್ರ ರೂಬರೂ ಪರಿಹರಪುರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳನ್ನು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ಎಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯುಮವಾದ ಸರ್ಕಾರದ ಸವಾಲಿಗೆ ಮೇಲ್ಪಟ್ಟುಖಾಯಿಷ್ ಮಾಡುವ ಲಿಖಿತ್ ಖರೀದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮ್ಮಿ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮ್ಮಿ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯುಮವಾದ ಸರ್ಕಾರದ ಸವಾಲ್ ಮೊಬಲಗು (ಅಪ್ಸೆಟ್‌ಪ್ರೈಸ್) ಖೈಕೆ ಯಾ ಚಲಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರ್ಹಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡೆದರೆ ದರಖಾಸ್ತುದಾರನ ಷುರೂ ಕೀವಣಿ ಮೊಬಲಗನ್ನು ವಾಪಸು ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮುನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಆಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೀವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪುರು ಡಿಪಾಜಿಟ್ ಮೊಬಲಗು ಭರ್ತಿಗೆ ಬಳಪಟ್ಟು ಅಖೈರ್ ಛಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ' ಸೂರ್ಯಾಸ್ತಮಯಕ್ಕೆ ಮುಂಚಿಯೇ ಅಖೈರ್ ಛಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಛಡದರಖಾಸ್ತುದಾರನು ಡಿಪಾಜಿಟ್ ಆಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ಸಪ್ಟಕ್ಕ ರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ವಿನಾದರು ಹುಟ್ಟಿದರೆ ಅದಕ್ಕೆ. ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಪುರು ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಕ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲೀ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಒರಪ ಮೂಲಕವಾಗಿ ಜರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನು ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ್ನ		ಷರಾ.
				ಸರ್ವೆ ನಂಬರ್.	ಅಕ್ಕರ.	
ಯಲೆಮಳಲು ಅಡಿಗೆ ಪೈಲ್ 121ನೇ ಪೈಕಿ. 33ನೇ ಪೈಕಿ.	ಕೆರ್ಕಹಳ್ಳಿ ಎಸ್ಟೇಟು ಮೆಸ್ಸರ್ಸ. ಎಚ್. ಜೋನ್ಸ್ ಸಾಹೇಬರವರು.	ಮೇಗುಂಡಿ ಹೊಣ್ಣಿಬಿ ಅಡಿಗೆಪೈಲ್ ಎಲೆ ಮಳಲು	ಹಾಲೀರೀ ಸರ್ವೆಯಿಂದ ಜಮೀನು ಮೇಲೆ ಹದ್ದುಬಸ್ತು ಮಾಡಿರುವಂತೆ ಬಾಂದು 6 ಕಲ್ಲು 6	100–38	100 ಅಥವಾ 150 ರೂಪಾಯಿಗಳು.	ಅಪ್ಸೆಟ್ ದರಖಾಸ್ತು ದಾರನ ಖಾಯಿಷ್ಕ ನಂಬಿ ಆಕಾರ ದಾವಲು ಮಾಡಬಹುದು.
			ಹಾಲಿ ಸರ್ವೆಯಿಂದ ಗುರ್ತಿಸಿರುವಂತೆ ಬಾಂದು 6 ಕಲ್ಲು 6	32—2	(32 ಅಥವಾ 48)	

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕರ್ಚಾ ಅಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜಮೀನ್ ಸಿಡುವಳೀದಾರನು ಬದ್ಧವಾಗಿರಬೇಕು.

ಟಿ. ವಿಯರ್,
ಡೆಪ್ಯೂಟಿ ಕಮ್ಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ.
ಇಸ್ತಿಹಾರ್‌ನಾಮೆ.

ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಾನೆಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೋಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ. ಇಷ್ಟಪುಳ್ಳವರು ಕ್ರಯಕ್ಕೆ ಪಡಿಯಬಹುದು.

ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.